ಕಾಲ ಮುಂದೆ ಸಾಗಿತು. ನಾನು ಮಂಗಳೂರು ಸೇರಿದ್ದೆ. ಕಡಲ ಕಿನಾರೆಯಲ್ಲಿ ಮನೆ ಮಾಡಿದ್ದೆ. ಒಂದು ದಿನ ಸಾಯಂಕಾಲ ಕಾವಿ ಶಾಲು ಹಾಕಿಕೊಂಡ ಹುಡುಗರ ಗುಂಪೊಂದು ಮನೆಗೆ ಬಂತು.

ಒಬ್ಬ ಹೇಳಿದ:

'ನಾವು ಅಯೋಧ್ಯೆಯಲ್ಲಿ ರಾಮನಿಗೆ ದೇವಸ್ಥಾನ ಕಟ್ಟ ಬೇಕಾಗಿದೆ. ಅದಕ್ಕಾಗಿ ಈ ಇಟ್ಟಿಗೆಯನ್ನು ಅಲ್ಲಿಗೆ ಕಳಿಸಬೇಕು. ಪ್ರಸಾದ ತಗೊಳ್ಳಿ, ಹಣ ಕೊಡಿ.'

'ಯಾವ ರಾಮನಿಗೆ ನೀವು ಅಲ್ಲಿ ದೇವಸ್ಥಾನ ಕಟ್ಟುತ್ತೀರಿ?'

'ಏನು ಹಾಗಂದರೆ? ನೀವು ಹಿಂದೂ ಅಲ್ಲವೇ? ಬಾಬ್ರಿ ಮಸೀದಿ ನಮ್ಮ ಜಾಗ.'

ಅವರಲ್ಲೊಬ್ಬ ಸಣ್ಣ ಭಾವಚಿತ್ರವೊಂದನ್ನು ತೆಗೆದು ನನ್ನ ಮುಂದೆ ಹಿಡಿದ.

ನಾನು ದಿಟ್ಟಿಸಿ ನೋಡಿದೆ.

ಅದು ಉಗ್ರ ಸ್ವರೂಪೀ ರಾಮನ ಚಿತ್ರವಾಗಿತ್ತು, ಕೈಯಲ್ಲಿ ಹೆದೆಯೇರಿಸಿದ ಬಿಲ್ಲು, ಮುಖದಲ್ಲಿ ರೌದ್ರ ಭಾವ. ಯಾರನ್ನೋ ಕೊಲ್ಲುವ ತವಕ.

ಬಂಟಮಲೆಯ ಬುಡದಲ್ಲಿದ್ದ ನನ್ನ ಗುಡಿಸಲಿನ ಗೋಡೆಯಲ್ಲಿ ನೇತಾಡುತ್ತಿದ್ದ ಹರಕಲು ಕ್ಯಾಲಂಡರು ನೆನಪಾಯಿತು. ಅಲ್ಲಿದ್ದದ್ದು ಸೌಮ್ಯ ಸ್ವರೂಪೀ ರಾಮನ ಜೊತೆಗೆ ಹಸನ್ಮುಖೀ ಸೀತೆ, ಕಾಲ ಬುಡದಲ್ಲಿ ಕೈ ಜೋಡಿಸಿ ಕುಳಿತ ಹನುಮ.

ಬಂದ ಜನರ ಹಾವ ಭಾವ, ಭಾಷೆ ನೋಡಿದಾಗ ಕಥನ ಬದಲಾಗಿದೆ ಅಂತನ್ನಿಸಿತು. ನಾನು ಕತೆ ಬಿಟ್ಟು ಕವಿತೆ ಬರೆಯತೊಡಗಿದೆ.

ಮನೆ ಮನೆಗೆ ಇಟ್ಟಿಗೆ<br>
ಜನರು ಹೊರಟರು ಒಟ್ಟಿಗೆ<br>
ಇಟ್ಟಿಗೆಯಲ್ಲಿ ಶ್ರೀ ರಾಮ<br>
ಜನಗಳ ಬಾಯಲ್ಲಿ ಓಂನಾಮ<br>
ಹಿಂದೂ ಜನಗಳು<br>
ಮುಂದೂ ಜನಗಳು<br>
ಮಧ್ಯ ಇಟ್ಟಿಗೆಯ ತುಂಡುಗಳು.

ನಮ್ಮಲ್ಲಿ ಅನೇಕ ಕತೆಗಳಿವೆ. ಕತೆ ಹೇಳುವುದರ ಕುರಿತೇ ಕತೆಗಳಿವೆ. ಇಲ್ಲಿ ಋಷಿಗಳೂ ಕತೆ ಹೇಳುತ್ತಾರೆ, ಬೇತಾಳನೂ ಕತೆ ಹೇಳುತ್ತಾನೆ.

ಈಗ ರಾಜಕಾರಣಿಗಳೂ ಕತೆ ಹೇಳುತ್ತಾರೆ. ಅವರ ಹೊಸ ಕಥನಗಳಲ್ಲಿ ಅಮ್ಮನಿರುವುದಿಲ್ಲ, ಅಜ್ಜನಿರುವುದಲ್ಲ, ಹಕ್ಕಿಗಳಿರುವುದಿಲ್ಲ, ವಿಮಾನದಿಂದ ಕೆಳಕ್ಕೆ ಬಿದ್ದ ಹೂಮಾಲೆಯೂ ಇರುವುದಿಲ್ಲ.

ಲೇಖಕರು ದೆಹಲಿಯ ಜವಾಹರಲಾಲ ನೆಹರೂ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠದ ಮುಖ್ಯಸ್ಥರು. ಸಾಹಿತ್ಯ, ಜಾನಪದ, ಯಕ್ಷಗಾನ ಕ್ಷೇತ್ರಗಳಲ್ಲಿ ಮಹತ್ವದ ಕೆಲಸ ಮಾಡಿದ್ದಾರೆ ಮತ್ತು ಪುಸ್ತಕಗಳನ್ನು ಪ್ರಕಟಿಸಿದ್ದಾರೆ.